ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೆರಡನೆಯ ಅಧಿವೇಶನ
ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಒಂದೇ ಕಾಮಗಾರಿಗೆ ಎರಡು ಬಾರಿ ಬಿಲ್ಲು ಸಲ್ಲಿಸಿರುವ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

277 (466) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ನಂ-7 ಹೇಮಾವತಿ ನಾಲಾ ವಿಭಾಗ ವ್ಯಾಪ್ತಿಯಲ್ಲಿ ನಾಲಾ ವ್ಯಾಪ್ತಿಗೆ ಒಳಪಟ್ಟ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗಳಲ್ಲಿ ಲೆಕ್ಕೇಗೌಡನ ಕೊಪ್ಪಲು-ದೊಂದೆಮಾದಹಳ್ಳಿ ಗ್ರಾಮದವರೆಗೆ, ಶಿಕಾರಿಪುರ- ಪಡುವಲಪಟ್ಟಣ ರಸ್ತೆ ಕಾಮಗಾರಿ ಮತ್ತು ತುಪ್ಪದಮಡು-ಅಂಕುಶಪುರ ರಸ್ತೆ ಒಂದೇ ಕಾಮಗಾರಿಯನ್ನು ಹೆಚ್.ಎಲ್.ಬಿ.ಸಿ. ನಂ-7 ಮತ್ತು ಕಾಡಾ ಯೋಜನೆ ತುಮಕೂರು ವಿಭಾಗದ ಇಲಾಖೆ ವತಿಯಿಂದ ನಿರ್ವಹಿಸಿ ಒಂದೇ ಕಾಮಗಾರಿಗೆ ಎರಡು ಬಿಲ್ಲು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ/ಇಲಾಖೆ ಸಂಬಂಧಪಟ್ಟ ಇಲಾಖೆ ಇಂಜಿನಿಯರ್ ಮತ್ತು ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;

(ಆ) 2018-19 ರಿಂದ 2020-21ನೇ ಸಾಲಿನವರೆಗೆ ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಹೇಮಾವತಿ ನಾಲಾ ವಿಭಾಗ ಮತ್ತು ಕಾಡಾ ಯೋಜನೆ ತುಮಕೂರು ವಿಭಾಗದ ಇಲಾಖಾ ವತಿಯಿಂದ ನಿರ್ವಹಿಸಿರುವ ಕಾಮಗಾರಿಗಳಾವುವು; ಸದರಿ ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ಮಾಡಿದ ಏಜೆನ್ಸಿ/ಸಂಸ್ಥೆ ಯಾವುದು? (ಪರಿಶೀಲನಾ ವರದಿ ಪ್ರತಿ ನೀಡುವುದು)